

# ಎರೆಮಣ್ಣಿನ ಕಾಮಧೇನು–ಗೋವಿನಮರ

## ಚಿತ್ರ ಬರಹ: ಡಾ.ಸತ್ಯ

ಕ್ಯಾಟ್ ವಾಕ್ ನಿಮಗೆ ಗೊತ್ತಿದೆಯಲ್ಲ. ಆದರೆ ಮಿಸ್‌ವಾಕ್ ಗೊತ್ತಿರಲಿಕ್ಕಿಲ್ಲ. ಆ ಹೆಸರಿನ ಮರದ ಮಹದುಪಕಾರ ಓದಿರಿ

ಕರಿ ನೆಲದ ಹಾಗೂ ಬಂಜರು ಮಣ್ಣಿನ ಸದಾ ಹಸಿರು ಮರವಿದು. ಕೆಲವೊಮ್ಮೆ ಹಿರಿ ಪೊದರು ರೂಪದಲ್ಲಿ ಬೇಲಿಗುಂಟ ಹಬ್ಬುವ ಗೋವಿನ ಮರಕ್ಕೆ ಗೋಣಿ ಎಂಬ ಹೆಸರಿದೆ. ಮಧ್ಯೋತ್ತರ ಕರ್ನಾಟಕದ ರೈತರಿಗೆ ಪರಿಚಿತ. ಆದರೆ ಇಂದು ಹೊಸ ಪೀಳಗೆ ಮಂದಿಗೆ ಗೋವಿನ ಮರದ ಬಹೂಪಯೋಗ ತಿಳಿಯದು. ಕಣ್ಣ ಮುಂದೆ ಇದ್ದರೂ ಅರಿಯುವ ಗೋಜಿಗೆ ಹೋಗರು. ಅಷ್ಟೇ ಅಲ, ಕುಡುಗೋಲು ಹಾಕಿ ತರಿದು ಬಿಡುವ ಪ್ರಮೆಯವೇ ಅಧಿಕ. ಮರದ ಉಪಕಾರಿ ಗುಣಗಳು ಒಂದೆರಡಲ್ಲ. ಪರಿಸರದ ಜೀವಿಗಳ ಉಳಿವಿಗೆ, ನೆಲದ ಆರೋಗ್ಯ ಕಾಪಾಡಲು ಮತ್ತು ರೋಗ ರುಜಿನ ನಿವಾರಿಸಲು, ತಡೆಯಲು ಗೋವಿನಂತೆಯೇ ಉಪಕಾರಿ ಈ ಮರ.

ಕೊಂಚ ದಪ್ಪನೆ ದುಂಡನೆ ಎದುರು ಬದಿರೆಲೆ. ಕುಳ್ಳನೆ ಕಾಂಡದ ಎಲ್ಲಾ ಬದಿಗೆ ಹರಡಿಕೊಂಡು ತೂಗಾಡುವ ಸುಂದರ ಟೊಂಗೆಗಳು. ತುದಿ ತುದಿಯಲ್ಲ ಬಿರಿಯುವ ಹೂಗೊಂಚಲು. ನಾಲ್ಕು ದಳ. ನಾಲ್ಕು ಕೇಸರ. ಗಣಿಕೆ ಹಣ್ಣಿನ ಗಾತ್ರ, ಹೋಲಿಕೆಯ ದುಂಡನೆ ಮಾಂಸಲ ಹಣ್ಣು. ಒಳಗೆ ಮಟಾಣಿ ಗುಂಡು ಬೀಜ. ಎಳೆ ರೆಂಬೆ ಬಣ್ಣ ಗಿಣಿ ಹಸಿರು, ಬಲಿತ ಕಾಂಡ ಬೂದು. ತಿಳು ತೊಗಟೆಯ ರೆಂಬೆಗಳಿವು. ಒಳಗಿನ ಬಿಳಿ ಮರ ಬಲು ಮಿದು ಮತ್ತು ಹಗುರ.

ತಮಿಳಿನ  ಹೆಸರು ಓಪ, ಕರ್ಕೋಲ್. ತೆಲುಗಿನದು ವರಗೋಗು. ಹಿಂದಿಯಲ್ಲಿ ಝಾಲ್, ಝಾಕ್. ಮರಾಠಿಯಲ್ಲಿ ಮತ್ತು ಸಂಸ್ಕೃತದ ಹೆಸರು ಪೀಲು. ಅಂಗ್ಲ ಭಾಷೆಯ ಹೆಸರು ಮಸ್ಟರ್ಡ್  ಅಥವಾ ಟೂತ್ ಬ್ರಶ್ ಮರ. ಅದಲ್ಲದೆ ಸಾಲ್ಟ್ ಬುಶ್ ಎಂಬ ಅನ್ವರ್ಥ ಹೆಸರಿದೆ. ಸವುಳು ಮಣ್ಣಿನಲ್ಲಿ ಸಹ ಬೆಳೆಯಬಲ್ಲ ಸ್ವಭಾವದಿಂದ ಈ ಹೆಸರು ದಕ್ಕಿದೆ. ನಿಜವಾಗಿಯೂ ಇದು ಟೂತ್ ಬ್ರಶ್ ಮರ. ರೆಂಬೆ ಮತ್ತು ನೆಲದಡಿಯ ಬೇರನ್ನು ನೀಟಾಗಿ ತುಂಡರಿಸಿ ಚಂದದ ಕಾಗದ ಪಟ್ಟಣದಲ್ಲಿ ಸಿಂಗರಿಸಿ ಮಾರಿದರೆ ೧೦ ಕಡ್ಡಿಗಳಿಗೆ ಕಡಿಮೆ ಎಂದರೆ ಹತ್ತಿಪ್ಪತ್ತು ರೂ. ಬೆಲೆ. ಅದನ್ನೆ ಮೆಸ್ವಾಕ್ ಎಂಬ ಹೆಸರಿನ ಟೂತ್ಪೇಸ್ಟ್ ತಯಾರಿಸುವ ಕಂಪೆನಿಗಳಿವೆ. ಆದರೆ ಅದನ್ನು ಖರೀದಿಸುವ ಪೇಟೆ ಮಂದಿಗಂತೂ ಈ ಮರದ  ತಲೆ ಬುಡ ತಿಳಿಯದು. ತಾನಾಗಿ ಮರ ಬೆಳೆಯುತ್ತಿರುವ  ಮಧ್ಯೋತ್ತರ ಕರ್ನಾಟಕದ ಮಂದಿ ಸಹ ಮರದ ಬಗ್ಗೆ ಗಂಭೀರವಾಗಿ  ಗಮನ ಹರಿಸಿರಲಿಕ್ಕಿರಲಿಲ್ಲ.



ಮೇಕೆ, ಕುರಿ, ಹಸು ಕರುಗಳ ಮೇವಿನ ಬಳಕೆಗೆ ಎಲೆ ಹಳ ಯೋಗ್ಯ. ಎಳೆ ಎಲೆ ತರಕಾರಿಯಾಗಿ ಬಳಸಬಹುದು. ಕಳಿತ ಕೆಂಪನೆ ಹಣ್ಣು ತಿನ್ನಲು ರುಚಿ. ಆರೋಗ್ಯ ದಾಯಕ. ತಂಪು ಪಾನಕದಂತಹ ಸಿಹಿ ಪಾನೀಯ ತಯಾರಿಕೆಯ ಮೂಲವಸ್ತು. ತೊಗಟೆಯ ಪುಡಿ ನಸ್ಯಪುಡಿಗೆ ಸೇರಿಸಲು ಯೋಗ್ಯ. ಕಾಂಡದ ತೊಗಟೆಯ ಕಷಾಯವು ಹೊಟ್ಟೆಯ ದುಂಡು ಹುಳ ನಿವಾರಕ. ಮುಟ್ಟಿನ ಸ್ರಾವ ಸರಿಪಡಿಸಲು ಸಹಕಾರಿ.  ಎಲೆಯಿಂದ ತಯಾರಿಸಿದ ಕಷಾಯವು  ಕೆಮ್ಮು, ದಮ್ಮು ಪರಿಹಾರಿ. ಮೊಳೆರೋಗದ ನೋವು ನೀಗಲು ಬಿಸಿ ಎಲೆಯ ಪೋಲ್ಟೀಸು ಉಪಕಾರಿ. ದೇಹದ ಬೊಜ್ಜು ಮತ್ತು ಮೂತ್ರಕೋಶದ ಕಲ್ಲು ಕರಗಿಸಲು ಗೋವಿನ ಮರದ ಹಣ್ಣು ಸಹಕಾರಿ. ಕೀಲು ಸಂದಿನ ನೋವು ಶಾಮಕ ಕೂಡಾ. ಕಿರಿ ಬೀಜ ಮಲ ಶೋಧಕ. ಮೂತ್ರ ಸಲೀಸಾಗಿ ಹೊರಹಾಕುತ್ತದೆ. ಬೀಜದೆಣ್ಣೆ ಸಹ ಕೀಲು ನೋವು, ಗಂಟು ಬಾವು ಉಪಶಾಮಕ.

ಕೃಷಿ ಭೂಮಿಯ ಸತ್ವ ಕಳೆದು ಹೋದರೆ ಗೋವಿನಮರದ ಎಲೆಯ ಗೊಬ್ಬರ ಹಕಿದರೆ ಮತ್ತೆ ಫಲವತ್ತತೆ ಬಂದೀತು. ಹೊಲಗಳ ಬದುವಿನಲ್ಲಿ ಮರ ಸಾಕಿ ಸಲಹಿದರೆ ಹೊಲದ ಬೆಳೆಗೆ ಮಹದುಪಕಾರ. ಏನೂ ಬೆಳೆಯಲಾಗದ ಬಂಜರು ನೆಲೆಕ್ಕೆ ಹಸಿರು ತುಂಬುವ ಕಾಯಕ ಒಳಿತು.

ಅಂತಹ ನೆಲದ ಬೆಳೆಯಾಗಬಲ್ಲ.  ಗೋವಿನ ಮರ ಅಂತಾರಾಷ್ಟ್ರೀಯ ಕೃಷಿ ಅರಣ್ಯ ಸಂಸ್ಥೆಯ ಪಟ್ಟಿಯಲ್ಲಿ ಸೇರಿದೆ.  ಅಷ್ಟೆ ಅಲ್ಲ. ಕೃಷಿ ಮತ್ತು ಪಶುಪಾಲನೆಯ ಕಸುಬಿಗೆ ಮಹದುಪಕಾರಿ ಎಂದು ಪ್ರಶಂಸಿತ. ಇಂತಹ ಉಪಕಾರಿ ಮರದ ಸಂರಕ್ಷಣೆ ಮಾತ್ರ ಸಾಲದು. ಅದರ ಸಂಗಡ ಜನರ ಪ್ರಾದೇಶಿಕ ಬಳಕೆ ದಾಖಲಾತಿ ಸಹ ಇಂದಿನ ಅಗತ್ಯಗಳಲ್ಲಿ ಒಂದು.

## ಕೃಷಿಕರಿಗೆ ಗೋವಿನ ಮರದ ಸಂರಕ್ಷಣೆಯಿಂದ ಲಾಭವೇನು?

೧. ತಮ್ಮ ಜಮೀನಿನ ಹೊರ ಅಂಚುಗಳಲ್ಲಿ ಮರ ನೆಡಬಹುದು. ಬರಗಾಲದ ದಿನಗಳ ಜಾನುವಾರು ಮೇವಿಗಿದು ಸಹಕಾರಿ. ಆಪದ್ಬಂಧು.
೨. ಬಲಿತ ಹಣ್ಣು ಸಂಗ್ರಹಿಸಿಡಿ (ಚಳಿಗಾಲದ ಕೊನೆದಿನ) ಮುಂದಿನ ಮಳೆಗಾಲದ ದಿನಗಳಲ್ಲಿ ಸಸಿ ಮಡಿ ಮಾಡಿ ಬೇಕಾದೆಡೆ ಬಿತ್ತಿರಿ. ಒಂದು ಕಿಲೊ ತೂಗುವ ಬೀಜಗಳ ಸಂಖ್ಯೆ ೩೮೦೦. ಮಡಿಗಳಲ್ಲಿ ಬೆಳೆವ ಸುಮಾರು ಮೂರು ವರ್ಷದ ಸಸಿ ಬೇರೆಡೆ ನೆಡಲು ಯೋಗ್ಯ.
೩. ಬಿಡುವಿನ ದಿನಗಳಲ್ಲಿ ಬೆರಳು ಗಾತ್ರದ ಬೇರು, ರೆಂಬೆ ಸಂಗ್ರಹಿಸಿ ಸನಿಹದ ಪೇಟೆಗೊಯ್ದು ಮಾರುಕಟ್ಟೆಗೊಳಿಸಲು ಪ್ರಯತ್ನಿಸಿ. ವ್ಯವಸ್ಥಿತ ವಿಧಾನಗಳಿಂದ ದೇಶೀಯ ಮತ್ತು ಪೌರಾತ್ಯ ಹಾಗೂ ಕೊಲ್ಲಿ ದೇಶಗಳ ಮಾರುಕಟ್ಟೆ ಸಹ ಪ್ರವೇಶಿಸಲು ಗೋವಿನ ಮರದ ಕಡ್ಡಿಗಳಿಗೆ ಅರ್ಹತೆ ಇದೆ. ಸಂಘ ಗಳ ಮೂಲಕ ಈ ಪ್ರಯತ್ನ ಯೋಗ್ಯ.
೪. ದುಬಾರಿ ಪೇಸ್ಟು, ಬ್ರಶ್ ಸಂಗ ಬಿಡಿರಿ. ಹೊಸ ಪೀಳಿಗೆ ಮಂದಿಗೆ ಸಹ ಪೀಲು ಮರದ ಕಡ್ಡಿ ಉಪಕಾರ ಮನವರಿಕೆ ಮಾಡಿರಿ. ಬಳಸಿರಿ. ತೊಗಟೆ ಪುಡಿಯಿಂದ ಉತ್ತಮ ಹಲ್ಲು ಪುಡಿ ಸಿದ್ಧ. ಅದಕ್ಕೂ ಪ್ರಚಾರ ಕೊಡಿ.
೫. ಬೀಳುಭೂಮಿ, ಗೋಮಾಳಗಳಲ್ಲಿ ಹೆಚ್ಚುಹೆಚ್ಚು ಮರ ಸಂತತಿ ಬೆಳೆದರೆ ಹಣ್ಣಿನ ಶರಬತ್, ಬೀಜದ ತೈಲಾಂಶ ಸಂಗ್ರಹಕ್ಕೆ ಸಂಕಲ್ಪಿಸಿ. ಒಂದು ಮಾತು ನೆನಪಿಡಿ.  ಮರ ಬೆಳೆಯುವುದು ಬಲು ನಿಧಾನ. ಬೆಳೆದ ಮರಕ್ಕೆ ಖಂಡಿತ ಕುಡುಗೋಲು ಹಾಕದಿರಿ.

## ಜೈವಿಕತಂತ್ರಜ್ಞಾನ ಮತ್ತು ಉದ್ದಿಮೆಗಳಿಗೆ ಗೋವಿನ ಮರದ ಬಳಕೆ :



* ಬೀಜದೆಣ್ಣೆ ಸಾಬೂನು, ಕ್ಯಾಂಡಲ್ ಮತ್ತು ನೋವು ಉಪಶಾಮಕ ಉದ್ದಿಮೆಗಳಿಗೆ ಯೋಗ್ಯ.
* ತೊಗಟೆ ಮತ್ತು ಬೇರಿನ ದಂತಾರೋಗ್ಯದಾಯಕ ಗುಣ ಪವಿತ್ರ ಖುರಾನಿನಷ್ಟೇ ಪುರಾತನ, ಸಂಬಂಧಿ ಉದ್ದಿಮೆಗೆ ಉತ್ತಮ ಅವಕಾಶ.
* ತೊಗಟೆಗೆ ದುಂಡು ಹುಳ ಪರಿಹಾರಿ ಗುಣವಿದೆ. ಹೊಸ ಹೊಸ ತಯಾರಿಕೆ ಮಾರುಕಟ್ಟೆಗೊಳಿಸಬಹುದು.
* ಎಲೆಗೆ ಮಲಶೋಧಕ ಮತ್ತು ಮಧುಮೇಹ ಪರಿಹಾರಿ ಗುಣವಿದೆ. ಉದ್ದಿಮೆ ಬಳಕೆಗೆ ಅರ್ಹ.
* ಪಶು ಆಹಾರದಲ್ಲಿ ಎಲೆ ಬಳಕೆ ಯೋಗ್ಯ. ಶೇಕಡಾ ಎಂಟಕ್ಕೂ ಅಧಿಕ ಸಸಾರಜನಕ ಸೇರಿದ ಎಲೆ ಬಳಕೆ ಉದ್ದಿಮೆಯಲ್ಲಿ ಉಪಕಾರಿ.

***